# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 219 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜ |
| ಉತ್ತರಿಸಬೇಕಾದ ದಿನಾಂಕ | : | 16.07.2024 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ನಿರ್ಮಿಸಲಾದ ಮಾರುಕಟ್ಟೆಗಳ ಕಾಮಗಾರಿಗಳನ್ನು ಅರ್ಧದಲ್ಲಿ ನಿಲ್ಲಿಸಲು ಕಾರಣವೇನು: | ಮಂಗಳೂರು ಮಹಾನಗರಪಾಲಿಕೆಯ ಮಾರುಕಟ್ಟೆಗಳ ನಿರ್ಮಾಣ ಕಾಮಗಾರಿಯಲ್ಲಿ ಎದುರಿಸಲಾದ ಸಮಸ್ಯೆಗಳು ಹಾಗೂ ಅನುಷ್ಠಾನಾದ ವಿಳಂಬಕ್ಕೆ ಕಾರಣಗಳು ಈ ಕೆಳಕಂಡಂತಿವೆ:-<br>1. ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಸುರತ್ಕಲ್ ಮಾರುಕಟ್ಟೆ ಸಂಕೀರ್ಣ ಕಟ್ಟಡದ ನಿರ್ಮಾಣ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತವನ್ನು ರೂ.7600.00 ಲಕ್ಷಗಳಿಂದ ರೂ. 8200.00 ಲಕ್ಷಗಳಿಗೆ ಹೆಚ್ಚಿಸಿ ಆಡಳಿತಾತ್ಮಕ ಅನುಮೋದನೆ ನೀಡಿ ಮತ್ತು ಪ್ರಸ್ತಾಪಿತ ಯೋಜನೆಯ ಮೂಲ ಗುತ್ತಿಗೆದಾರರಾದ M/s Balajikrupa Projects Private Limited ಇವರು ರೂ.1675.04 ಲಕ್ಷಗಳಿಗೆ ಭಾಗಶಃ ಕಾಮಗಾರಿಯನ್ನು ಅಂತಿಮಗೊಳಿಸಿ, ಬಾಕಿ ಇರುವ ಕಾಮಗಾರಿಯನ್ನು ಚಾಲ್ತಿ ದರಪಟ್ಟಿಯಂತೆ ಹೊಸದಾಗಿ ಟೆಂಡರ್ ಆಹ್ವಾನಿಸಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 446 ಎಸ್‌ಎಫ್‌ಸಿ 2021, ದಿನಾಂಕ: 31.12.2022 ರನ್ವಯ ದಿನಾಂಕ 21.02.2023 ರಂದು ಟೆಂಡರ್ ಕರೆಯಲಾಗಿರುತ್ತದೆ.<br>2. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 1 ಟಿಎಫ್ ಪಿ 2023, ದಿನಾಂಕ: 22-05-2023 ರಲ್ಲಿ ಪ್ರಾರಂಭವಾಗದೇ ಇರುವ ಎಲ್ಲಾ ಕಾಮಗಾರಿಗಳನ್ನು ಮುಂದಿನ ಆದೇಶದವರೆಗೆ ತಡೆ ಹಿಡಿಯಲು ಸೂಚಿಸಲಾಗಿದ್ದು, ದಿನಾಂಕ:28-06-2023 ರಲ್ಲಿ ಮತ್ತೊಮ್ಮೆ ಸದರಿ ಸೂಚನೆಯನ್ನು ಮುಂದುವರೆಸಲಾಗಿರುತ್ತದೆ.<br>3. ತದನಂತರ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 1 ಟಿಎಫ್ ಪಿ 2023, ದಿನಾಂಕ: 31-07-2023 ರ ಕ್ರ.ಸಂ. (3) ರಲ್ಲಿ "ಹಿಂದಿನ ಸರ್ಕಾರದಿಂದ ಅನುಮೋದನೆಗೊಂಡು ಇನ್ನೂ ಪ್ರಾರಂಭವಾಗದಿರುವ (unstarted) ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಸಚಿವರ ಅನುಮೋದನೆಯೊಂದಿಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಆಡಳಿತ ಇಲಾಖೆಯ ಕಾರ್ಯದರ್ಶಿಗಳು ಕ್ರಮ ವಹಿಸಲು ಸೂಚಿಸಲಾಗಿರುತ್ತದೆ. |

4. ಈ ಹಿನ್ನೆಲೆಯಲ್ಲಿ ಸದರಿ ಟೆಂಡರ್‌ನ ಆರ್ಥಿಕ ಬಿಡ್ ಅನುಮೋದನೆ ಪ್ರಕ್ರಿಯೆ ಮುಂದುವರೆಸುವ ಪ್ರಸ್ತಾವನೆಗೆ ಸರ್ಕಾರದ ಅನುಮತಿ ಕೋರಿ ದಿನಾಂಕ:29-11-2023 ರಂದು ಪೌರಾಡಳಿತ ನಿರ್ದೇಶನಾಲಯದಿಂದ ಸಲ್ಲಿಸಲಾಗಿದ್ದು, ದಿನಾಂಕ:16-03-2024 ರಂದು ಸರ್ಕಾರದ ಅನುಮತಿ ನೀಡಲಾಗಿದೆ.
5. ದಿನಾಂಕ: 16-03-2024 ರಿಂದ ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದುದ್ದರಿಂದ ಸದರಿ ಆರ್ಥಿಕ ಬಿಡ್‌ನ್ನು ರಾಜ್ಯ ಮಟ್ಟದ ಟೆಂಡರ್ ಪರಿಶೀಲನಾ ಸಮಿತಿ ಸಭೆಯ ಮುಂದೆ ಮಂಡಿಸಲು ಸಾಧ್ಯವಾಗಿರುವುದಿಲ್ಲ.
6. ತದನಂತರ, ದಿನಾಂಕ:25-06-2024 ರಂದು ನಡೆದ 62 ನೇ ರಾಜ್ಯ ಮಟ್ಟದ ಟೆಂಡರ್ ಪರಿಶೀಲನಾ ಸಮಿತಿ ಸಭೆಯಲ್ಲಿ ಸದರಿ ಟೆಂಡರ್‌ನ ಆರ್ಥಿಕ ಬಿಡ್‌ನ್ನು ಅನುಮೋದಿಸಿದ್ದು, ಸರ್ಕಾರದ ಆದೇಶ ಹೊರಡಿಸಲು ಕ್ರಮವಹಿಸಲಾಗುತ್ತಿದೆ.
7. ಮುಂದುವರೆದು, ಕಂದಾಯ ಇಲಾಖೆಯವರಿಗೆ ಸೇರಿದ 0.35 ಎಕರೆ ಪ್ರದೇಶದಲ್ಲಿದ್ದ ನಾಡಕಛೇರಿ ಕಟ್ಟಡವನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಕಟ್ಟಡಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಂಡ ತರುವಾಯ ನಾಡಕಛೇರಿ ಕಟ್ಟಡವನ್ನು ನವೆಂಬರ್ 2018 ರಲ್ಲಿ ತೆರವುಗೊಳಿಸಲಾಗಿರುತ್ತದೆ.
8. ಕೃಷಿ ಇಲಾಖೆಯವರಿಗೆ ಸೇರಿದ 0.10 ಎಕರೆ ಸ್ಥಳದಲ್ಲಿರುವ ರೈತ ಸಂಪರ್ಕ ಕೇಂದ್ರ ತೆರವು ಬಗ್ಗೆ ಸುರತ್ಕಲ್ ವಲಯ ಕಛೇರಿ ಇರುವ ನಿವೇಶನದಲ್ಲಿ 0.10 ಎಕರೆ ಜಾಗವನ್ನು ಮೀಸಲಿರಿಸಿ, ಹೊಸದಾಗಿ ನೆಲ, ಪ್ರಥಮ, ದ್ವಿತೀಯ ಮಹಡಿ ಹೊಂದಿರುವ ಹೊಸ ರೈತ ಸಂಪರ್ಕ ಕೇಂದ್ರ ಕಟ್ಟಡವನ್ನು ಮಂಗಳೂರು ಮಹಾನಗರ ಪಾಲಿಕೆಯಿಂದ ನಿರ್ಮಿಸಿದ ನಂತರ ಕೃಷಿ ಇಲಾಖೆಯವರು ಸ್ಥಳಾಂತರಗೊಂಡಿದ್ದು, ಈ ಜಾಗವು ಫೆಬ್ರುವರಿ 2021 ರಲ್ಲಿ ಲಭ್ಯವಾಗಿರುತ್ತದೆ.
9. ಹೊಸದಾಗಿ ನಿರ್ಮಾಣವಾಗುತ್ತಿರುವ ಮಾರುಕಟ್ಟೆಯ ಪಶ್ಚಿಮ ಭಾಗದಲ್ಲಿ ಒಟ್ಟು 61 ಮಳಿಗೆಗಳ ನಿರ್ಮಾಣದ ಕಾಮಗಾರಿ ಮಾರ್ಚ್ 2021 ರಿಂದ ಪ್ರಗತಿಯಲ್ಲಿರುತ್ತದೆ. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾರುಕಟ್ಟೆ ಮಳಿಗೆಗಳನ್ನು ಹೊಸ ಮಾರುಕಟ್ಟೆ ಮಳಿಗೆಗಳಿಗೆ ಸ್ಥಳಾಂತರಿಸುವುದರಿಂದ ಮುಂದುವರೆದ ಮಾರುಕಟ್ಟೆ ನಿರ್ಮಾಣದ ಕಾಮಗಾರಿಗೆ 0.68 ಎಕರೆ ಪ್ರದೇಶವು ಲಭ್ಯವಾಗುತ್ತದೆ.
10. ಪ್ರಸ್ತಾಪಿತ ನಿವೇಶನದ ಮಧ್ಯದಲ್ಲಿ ಹಾಲಿ ಒಳಚರಂಡಿ ಜಾಲ ಹಾದು ಹೋಗಿರುವುದರಿಂದ ಕಟ್ಟಡ ನಿರ್ಮಾಣಕ್ಕೆ ಅಡ್ಡಿಯಾಗಿದ್ದು, ಸದರಿ ಒಳಚರಂಡಿ ಜಾಲವನ್ನು ನಿವೇಶನದ ಹೊರ ಭಾಗದಲ್ಲಿ ಹಾದು ಹೋಗುವಂತೆ ಹೊಸ ಒಳಚರಂಡಿ ಜಾಲ ನಿರ್ಮಾಣ

| | | |
|---|---|---|
| | | ಮಾಡಬೇಕಾಗಿದ್ದರಿಂದ ಮಾರುಕಟ್ಟೆ ನಿರ್ಮಾಣ ಕಾಮಗಾರಿಯು ವಿಳಂಬವಾಗಿರುತ್ತದೆ. ಹಾಲಿ ನಿರ್ಮಾಣಕ್ಕೆ ಅಗತ್ಯವಿರುವ 03.56 ಎಕರೆ ಪ್ರದೇಶದಲ್ಲಿ 03.26 ಎಕರೆ ಭೂ ಪ್ರದೇಶ ಲಭ್ಯವಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಬಹುದಾಗಿದೆ. |
| ಆ) | ನಗರಪಾಲಿಕೆ ವ್ಯಾಪ್ತಿಯಲ್ಲಿ ಮಾರುಕಟ್ಟೆಗಳಿಗೆ ವಿನಿಯೋಗಿಸಿರುವ ಹಣವು ಯಾವುದೇ ನಿಯಮ ಬದ್ಧವಾದ ಯೋಜನೆ ಇಲ್ಲದೆ ಸರ್ಕಾರದ ಹಣ ಪೋಲು ಮಾಡುಲಾಗುತ್ತಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಾರುಕಟ್ಟೆಗಳಿಗೆ ವಿನಿಯೋಗಿಸಿರುವ ಹಣವನ್ನು ನಿಯಮ ಬದ್ಧವಾಗಿ ಬಳಸಲಾಗುತ್ತಿದೆ. |
| ಇ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 6 ಮಾರುಕಟ್ಟೆಗಳ ಸ್ಥಳಾವಕಾಶವನ್ನು ಗ್ರಾಹಕರಿಗೆ ವಹಿಸಕೊಡದೆ ಕಾಮಗಾರಿಗಳನ್ನು ನಿಲ್ಲಿಸಿ ಸಾರ್ವಜನಿಕರ ಹಣ ಪೋಲು ಮಾಡುತ್ತಿರುವುದು ಸರಿಯೇ: (ವಿವರ ನೀಡುವುದು) | ಮೇಲೆ ವಿವರಿಸಿರುವ ಕಾರಣಗಳನ್ವಯ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಾರುಕಟ್ಟೆ ನಿರ್ಮಾಣ ಕಾಮಗಾರಿಯು ವಿಳಂಬವಾಗುತ್ತಿದ್ದು, ಮಾರುಕಟ್ಟೆಯ ಸ್ಥಳಾವಕಾಶ / ಮಳಿಗೆಗಳು ಗ್ರಾಹಕರಿಗೆ ಹಂಚಿಕೆಯಾಗದೇ ಖಾಲಿ ಇರುವ ಬಗ್ಗೆ ವಿವರಗಳು ಈ ಕೆಳಕಂಡಂತಿವೆ:-<br><br>**<u>ಕದ್ರಿ ಮಾರುಕಟ್ಟೆ:</u>** |
| ಈ) | ಮಾರುಕಟ್ಟೆ ನಿರ್ಮಿಸುವಾಗ 7, 4 ಮತ್ತು 5 ಅಂತಸ್ತಿನ ಮಾರುಕಟ್ಟೆ ನಿರ್ಮಾಣ ಮಾಡಿ ಯಾವುದೇ ಗ್ರಾಹಕರಿಗೆ ನೀಡದೇ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು) | 1. ಕಾಮಗಾರಿಯ ಅಂದಾಜು ಮೊತ್ತ ರೂ. 1,075.24 ಲಕ್ಷಗಳು ಮತ್ತು ಕಟ್ಟಡದ ವಿನ್ಯಾಸ: LB, UB, LG, UG + 3<br>2. ಪ್ರಸ್ತುತ ಮಾರುಕಟ್ಟೆಯ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>3. ಕೆಳ ನೆಲಮಹಡಿಯ ಒಟ್ಟು 38 ಅಂಗಡಿಗಳ ಪೈಕಿ 16 ಅಂಗಡಿಗಳನ್ನು ಇ-ಟೆಂಡರ್ ಮೂಲಕ ಬಾಡಿಗೆಗೆ ನೀಡಲಾಗಿರುತ್ತದೆ. ಉಳಿಕೆ 22 ಅಂಗಡಿಗಳಿಗೆ ಸಿಂಗಲ್ ಬಿಡ್ ಆಗಿದ್ದು, ಮರು ಟೆಂಡರ್ ಕರೆಯುವ ಹಂತದಲ್ಲಿರುತ್ತದೆ.<br>4. ಮೇಲಿನ ನೆಲಮಹಡಿ ಹಾಗೂ ಮೊದಲನೇ ಮಹಡಿಯನ್ನು ಇ-ಟೆಂಡರ್ ಮೂಲಕ ಬಾಡಿಗೆಗೆ ನೀಡಲಾಗಿರುತ್ತದೆ.<br>5. 2ನೇ ಮತ್ತು 3ನೇ ಮಹಡಿಯನ್ನು ಬಾಡಿಗೆಗಾಗಿ ಟೆಂಡರ್ ಕರೆಯಲಾಗಿದ್ದು, ಸಿಂಗಲ್ ಬಿಡ್ ಆಗಿರುವ ಕಾರಣ ಮರು ಟೆಂಡರ್ ಕರೆಯುವ ಹಂತದಲ್ಲಿರುತ್ತದೆ.<br><br>**<u>ಉರ್ವ ಮಾರುಕಟ್ಟೆ:</u>**<br><br>1. ಸದರಿ ಮಾರುಕಟ್ಟೆಯನ್ನು ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಲಾಗಿದ್ದು, ದಿನಾಂಕ 25.01.2022 ರಂದು ಮಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿರುತ್ತದೆ. |

| | | |
|---|---|---|
| | | 2. ಸದರಿ ಮಾರುಕಟ್ಟೆಯ 31 ಮಳಿಗೆಗಳಿಗೆ ಇ-ಟೆಂಡರ್ ಮೂಲಕ ಟೆಂಡರ್ ಅಹ್ವಾನಿಸಲಾಗಿದ್ದು, ಯಾವುದೇ ಬಿಡ್ ದಾರರು ಭಾಗವಹಿಸಿರದ ಕಾರಣ ಮರು ಟೆಂಡರ್ ಕರೆಯುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br>3. ಕೆಳ ನೆಲಮಹಡಿಯ 2 ಮಳಿಗೆಗಳನ್ನು ಗುರು ಸೌಹಾರ್ದ ಸಹಕಾರ ನಿಗಮ ನಿಯಮಿತ ಇವರಿಗೆ ಬಾಡಿಗೆಗೆ ನೀಡಲಾಗಿದೆ.<br>4. 2 ನೇ ಮಹಡಿಯನ್ನು ಕಾರ್ಯಪಾಲಕ ಅಭಿಯಂತರರು, KRIDL ಕಚೇರಿಗೆ ಹಾಗೂ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಇಲಾಖೆಗೆ ಬಾಡಿಗೆಗೆ ನೀಡಲಾಗಿದೆ.<br><br>**ಬಿಜೈ ಮಾರುಕಟ್ಟೆ:**<br>1. ಸದರಿ ಮಾರುಕಟ್ಟೆಯ 53 ಮಳಿಗೆಗಳ ಪೈಕಿ 38 ಮಳಿಗೆಗಳನ್ನು ಬಾಡಿಗೆಗೆ ನೀಡಲಾಗಿದೆ.<br>2. ಉಳಿಕೆ 15 ಮಳಿಗೆಗಳಿಗೆ ಟೆಂಡರ್ ಆಹ್ವಾನಿಸಿದ್ದು, ಯಾವುದೇ ಬಿಡ್‌ದಾರರು ಭಾಗವಹಿಸಿರದ ಕಾರಣ ಮರು ಟೆಂಡರ್ ಕರೆಯಲು ಕ್ರಮವಹಿಸಲಾಗುತ್ತಿದೆ.<br><br>**ಅಳಕೆ ಮಾರುಕಟ್ಟೆ:**<br>1. ಸದರಿ ಮಾರುಕಟ್ಟೆಯ 25 ಮಳಿಗೆಗಳ ಪೈಕಿ 6 ಮಳಿಗೆಗಳನ್ನು ಬಾಡಿಗೆಗೆ ನೀಡಲಾಗಿದೆ.<br>2. ಉಳಿಕೆ 19 ಮಳಿಗೆಗಳಿಗೆ ಟೆಂಡರ್ ಆಹ್ವಾನಿಸಿದ್ದು, ಯಾವುದೇ ಬಿಡ್‌ದಾರರು ಭಾಗವಹಿಸಿರದ ಕಾರಣ ಮರು ಟೆಂಡರ್ ಕರೆಯಲು ಕ್ರಮವಹಿಸಲಾಗುತ್ತಿದೆ.<br><br>**ಕಂಕನಾಡಿ ಮಾರುಕಟ್ಟೆ:**<br>1. ಕಾಮಗಾರಿಯ ಅಂದಾಜು ಮೊತ್ತ ರೂ. 4010.00 ಲಕ್ಷಗಳು ಮತ್ತು ಕಟ್ಟಡದ ವಿನ್ಯಾಸ: LB, UB, LG, UG + 6.<br>2. ಪ್ರಸ್ತುತ ಮಾರುಕಟ್ಟೆಯ ನಿರ್ಮಾಣ ಕಾಮಗಾರಿಯು ಅಂತಿಮ ಹಂತದಲ್ಲಿರುತ್ತದೆ. |

**ಸಂಖ್ಯೆ: ನಅಇ 47 ಎಂಎಂಸಿ 2024 (ಇ)**

(**ಬಿ.ಎಸ್. ಸುರೇಶ**)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು